# ಸೂಪರ್ ಅಮ್ಮ ಸ್ಪರ್ಧೆಗೆ ಚಾಲನೆ

ಬೆಂಗಳೂರು: ಮಂತ್ರಿ ಸ್ಕ್ವೇರ್ 'ಬೆಂಗಳೂರು ಸೂಪರ್ ಅಮ್ಮ' ಸ್ಪರ್ಧೆ ಐದನೇ ಆವೃತ್ತಿಗೆ ಚಾಲನೆ ನೀಡಿದೆ. ತಾಯ್ತನದ ಜತೆಗೆ ಬಹುಮುಖಿಯಾಗಿ ಸೇವೆ ಸಲ್ಲಿಸುತ್ತಿರುವ ಅಮ್ಮಂದಿರು ಇದರಲ್ಲಿ ಪಾಲ್ಗೊಳ್ಳಬಹುದಾಗಿದೆ. ಕೆಲಸದ ಮಧ್ಯೆ ಕೌಟುಂಬಿಕ ಜೀವನ ಸಮತೋಲನ ಕಾಪಾಡುವ ಮಹಿಳೆಯರನ್ನು ಗುರುತಿಸುವುದು ಈ ಸ್ಪರ್ಧೆಯ ಉದ್ದೇಶವಾಗಿದೆ. ಸ್ಪರ್ಧಿಗಳಿಗೆ ವಿವಿಧ ಕಾರ್ಯಾಗಾರ, ಲಿಖಿತ ಪರೀಕ್ಷೆ, ಸಂದರ್ಶನ ನಡೆಯಲಿದ್ದು, ಬಳಿಕ ಸೆಮಿಫೈನಲ್ ಪ್ರವೇಶಿಸಬಹುದಾಗಿದೆ. ಆಸಕ್ತರು ಮಂತ್ರಿ ಸ್ಕ್ವೇರ್ ಕಚೇರಿಗೆ ಸಂಪರ್ಕಿಸಬಹುದು.